ಇತರರನ್ನು ಹೀಯಾಳಿಸಿ ನಾಲಿಗೆ ತುರಿಸಿಕೊಳ್ಳುವ ಹವ್ಯಾಸ.

ನಿಜಕ್ಕೂ ಅದೇ ಹುಡುಗಿಯ ತಂದೆಯ ದ್ವೇಷಿಗಳು ಅಹಿತ ಚಿಂತಕರು. ಪೊಲೀಸರಿಗೆ ಗೌಪ್ಯವಾಗಿ ತಿಳಿಸಿದ ಕಾರಣ ಪೊಲೀಸರು ಬಂದು ಅವರನ್ನು ವಿಚಾರಿಸಿದರೆ ಅವರು "ನಮ್ಮ ಹುಡುಗಿಗೆ ಈ ವಿಷಯ ಏನೂ ತಿಳಿಯದು. ಆ ದಿನ ಆಕೆಗೆ ಜೋರು ನೆಗಡಿ ಶೀತ. ಸ್ವಲ್ಪ ಜ್ವರವೂ ಇತ್ತು. ಮನೆಯಲ್ಲೇ ಹಾಸಿಗೆಯಲ್ಲೇ ಮಲಗಿದ್ದಳು. ಶಾಲೆಗೆ ಹೋಗಲೇ ಇಲ್ಲ. ನಾನೇ ಸ್ವತಃ ಕರಿಮೆಣಸು ಕಷಾಯ ಮಾಡಿ ಕುಡಿಸಿದೆ" ಎಂದು ಪ್ರಮಾಣ ಮಾಡಿ ಉತ್ತರ ಕೊಟ್ಟರು.

ಹೀಗಾಗಿ ವಿಶ್ವಾಸ ಯೋಗ್ಯವಾದ ಸಾಕ್ಷಿಗಳು ಯಾರೂ ಇಲ್ಲದಂತಾಯಿತು.

ಮತ್ತೆ ಮೃತನ ತಂದೆತಾಯಿಗಳೇ ಅಷ್ಟು ಸ್ಪಷ್ಟವಾಗಿ ಆಪಾದಿತನ ಮೇಲೆ ತಮಗೆ ಎಳ್ಳಷ್ಟೂ ಸಂಶಯವಿಲ್ಲ ಎಂದು ಹೇಳಿದ ಮೇಲೆ ಕೋರ್ಟು ಬೇರೆ ಏನು ಮಾಡಬಹುದು?

★★★

ರುದ್ರಪ್ಪ ಊರಿಗೆ ಮರಳಿದಾಗ ಅಂಗಡಿ ರಾಮಯ್ಯನವರು ಶಾಲೆಯ ಹೂದೋಟದಿಂದ ಗೊಂಡೆ ಹೂಗಳನ್ನು ಕಿತ್ತು ಒಂದು ಹೂಮಾಲೆ ಪೋಣಿಸಿ ಕೈಯಲ್ಲಿ ಹಿಡಕೊಂಡು ಆನಂದಬಾಷ್ಪ ಸೇಚಿತರಾಗಿ ರುದ್ರಪ್ಪನನ್ನು ಅಲಂಗಿಸಿದರು.

ನೆರೆಮನೆ ನಾಗಮ್ಮನ ಗಂಡ ಒಂದು ದೊಡ್ಡ ಬಾಳೆಯ ಹಣ್ಣಿನ ಗೊನೆಯನ್ನೂ ಒಂದು ಹಲಸಿನ ಹಣ್ಣನ್ನೂ ಸ್ವಾಗತಕ್ಕಾಗಿ ರುದ್ರಪ್ಪನ ಮನೆಯಲ್ಲಿ ಸಮರ್ಪಿಸಿದ.

ದೂರದ ಗುಡ್ಡ ಕಿಂಚಣ್ಣ ಮಾತ್ರ ಸ್ವಾಗತಮಾಡಲು ಬರಲಿಲ್ಲ. "ಇತರರ ಹಣಕಾಸಿನ ವ್ಯಾಜ್ಯದಲ್ಲಿ ಕೈಹಾಕುವವರ ಸಂಗ ನನಗೆ ಬೇಡ. ರುದ್ರಪ್ಪನ ಸಹವಾಸ ಆ ಮೋಸಗಾರ ಅಂಗಡಿ ರಾಮಯ್ಯನಿಗೇ ಇರಲಿ" ಎಂದು ದೂರ ನಿಂತ.

ಗಾಡಿ ಐತಪ್ಪ ಧಾರಾಳವಾಗಿ ಹೆಂಡ ಕುಡಿದು "ರುದ್ರಪ್ಪನಲ್ಲ ಗುದ್ದಪ್ಪ. ನನ್ನ ಎತ್ತಿಗೆ ಗುದ್ದಿದ. ನನ್ನ ಬೆನ್ನಿಗೆ ಗುದ್ದಿದ. ಕೋರ್ಟಿಗೆ ಗುದ್ದಿದ. ಜಡ್ಜಿಗೆ ಗುದ್ದಿದ. ವಕೀಲಿಗೆ ಗುದ್ದಿದ" ಎಂದು ಏನೇನೋ ಹುಚ್ಚುಚ್ಚಾಗಿ ಬಡಬಡಿಸುತ್ತಾ ಇದ್ದ.

★★★

ರುದ್ರಪ್ಪನ ಸ್ವಾಗತಕ್ಕೆಂದು ನೆರೆದ ಗ್ರಾಮಸ್ಥರಿಗೆಲ್ಲಾ ಚುಟುಕಿನಲ್ಲೇ ಯಥೋಚಿತವಾಗಿ ಕೈಮುಗಿದು ಅವರನ್ನೆಲ್ಲಾ ಬಿಟ್ಟು ನೇರವಾಗಿ ಸೀದಾ ಗುಡಿಸಲು ಸಂಜೀವನ ಮನೆಗೆ ಬಂದ.

ಬಂದು ಮುದಿ ದಂಪತಿಯ ಕಾಲುಗಳನ್ನು ಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದ.

ಗುಡಿಸಲು ಸಂಜೀವ "ಛೆ! ನೀವು ದೊಡ್ಡ ಮನೆತನದವರು. ನಮ್ಮ ಕಾಲು ಮುಟ್ಟುವುದು ಸರಿಯೇ?" ಎಂದಾಗ ರುದ್ರಪ್ಪ "ನೀವು ನನ್ನ ತಂದೆ. ನೀವು ನನ್ನ ತಾಯಿ" ಎಂದು ಉತ್ತರ ಕೊಟ್ಟ.

ರುದ್ರಪ್ಪನ ಮನೆಯಲ್ಲಿ ಹೆಂಡತಿ ಹೂವಮ್ಮ ನೆರೆಮನೆ ನಾಗಮ್ಮನ ಗಂಡ ಕೊಟ್ಟ ಹಲಸಿನ ಹಣ್ಣಿನ ಪಾಯಸವನ್ನು ಗಂಡನ ಸ್ವಾಗತಕ್ಕೆಂದು ಮಾಡುವ ಸಡಗರದಲ್ಲಿದ್ದವಳಿಗೆ ಈ ವಾರ್ತೆ ಕಿವಿಗೆ ಬಿತ್ತು – ಕುದಿಯುವ ಎಣ್ಣೆಯಂತೆ!

ಆಕೆಗೆ ಬಹಳ ಮಾನಭಂಗವಾಯಿತು. "ಏನು ಅಸಹ್ಯ! ಗುಡಿಸಲು ಮನೆ ಸಂಜೀವನ ಮತ್ತು ಅವನ ಮುದುಕಿಯ ಕಾಲು ಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡುವುದು ಎಂದರೆ? ನಮ್ಮಂತಹ ದೊಡ್ಡ ಮನೆಯವರು? ಏನು ನಾಚಿಕೆಕೇಡು? ಒಂದಿಷ್ಟಾದರೂ ಮನೆತನದ ಘನತೆ ಮರ್ಯಾದೆಗಳನ್ನು ಯೋಚಿಸಬೇಡವೆ? ಇಂಥವರಿಗೆ ಪಾಯಸವಲ್ಲ" ಎಂದು ಥೂಕರಿಸಿ ಉಗಳಿದಳು.